**ಹೆಚ್‌ಆರ್‌ಎಂಎಸ್ 1.0 – ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್) ಮೊಬೈಲ್ ಅಪ್ಲಿಕೇಶನ್**

**ಕೆಎಎಸ್‌ಎಸ್ ಮೊಬೈಲ್ ಅಪ್ಲಿಕೇಶನ್ ಬಳಸಿಕೊಂಡು ಕುಟುಂಬ ಅವಲಂಬಿತರ ಡೇಟಾ ನಮೂದು ಮಾಡುವ ವಿಧಾನ**


ಮೊದಲು ಬಳಕೆದಾರರು https://hrms.karnataka.gov.in ಗೆ **ಲಾಗಿನ್ ಆಗಿ** HRMS-Enroll Webportal ಅನ್ನು ಕ್ಲಿಕ್ ಮಾಡಿದ ನಂತರ https://hrmsenroll.karnataka.gov.in ಅಪ್ಲಿಕೇಶನ್ ನಲ್ಲಿ DOWNLOAD EMPLOYEE AADHAR APK ಅನ್ನು ಕ್ಲಿಕ್ ಮಾಡಿ ಆಪ್ ಅನ್ನು ಮೊಬೈಲ್ ನಲ್ಲಿ ಅನುಸ್ಥಾಪಿಸಬೇಕು.

ಈ ಮೊಬೈಲ್ ಅಪ್ಲಿಕೇಶನ್ ನೌಕರರಿಗೆ/ಅವಲಂಬಿತರಿಗೆ ಸಂಬಂಧಿಸಿದ ಮಾಹಿತಿಯನ್ನು ಸೇರಿಸಲು, ಮಾರ್ಪಡಿಸಲು ಅಥವಾ ಅಳಿಸಲು ಅವಕಾಶವನ್ನು ಒದಗಿಸುತ್ತದೆ.

**ಹೊಸ ಬಳಕೆದಾರರ ನೋಂದಣಿ**


1. **ನೋಂದಣಿ:**

ಪ್ರಥಮ ಬಾರಿ ಬಳಸುವ ಬಳಕೆದಾರರಿಗೆ – ನೋಂದಣಿ (ಒಂದು ಬಾರಿ)




**ಹೊಸ ಬಳಕೆದಾರರ (New User) ಮೇಲೆ ಕ್ಲಿಕ್ ಮಾಡಬೇಕು.**


- *ನೌಕರರ ಕೆಜಿಐಡಿ ಸಂಖ್ಯೆಯನ್ನು ನಮೂದಿಸಬೇಕು*
- *ಓಟಿಪಿಯನ್ನು ಪಡೆಯಿರಿ ಎಂಬುದನ್ನು ಕ್ಲಿಕ್ ಮಾಡಬೇಕು*
- *ನೊಂದಣಿಯಾದ ಮೊಬೈಲ್ ಸಂಖ್ಯೆಗೆ ಪಡೆದ ಓಟಿಪಿಯನ್ನು ದಾಖಲಿಸಿ ಸಲ್ಲಿಸಿ* **(SUBMIT)** *ಎಂಬುದನ್ನು ಕ್ಲಿಕ್ ಮಾಡಬೇಕು.*




**ಗಮನಿಸಿ: ಮೊಬೈಲ್ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ, ಹೆಚ್‌ಆರ್‌ಎಂಎಸ್1 ಅಪ್ಲಿಕೇಷನ್‌ನಲ್ಲಿ ಮೊಬೈಲ್ ಸಂಖ್ಯೆಯನ್ನು ನವೀಕರಿಸಲು ದಯವಿಟ್ಟು ಡಿಡಿಓ ರವರನ್ನು ಸಂಪರ್ಕಿಸಿ.*

## 2. ಹೊಸ ಬಳಕೆದಾರರ ಗುಪ್ತ ಪದ (PASSWORD) ಹೊಂದಿಸಿ:

ಬಳಕೆದಾರರು ನಿಯಮದಂತೆ, ಗುಪ್ತಪದವನ್ನು (Password) ದಾಖಲಿಸಿ ನಂತರ ಅದನ್ನೆ ಖಚಿತಪಡಿಸಿ **ಉಳಿಸಿ (SAVE)** ಎಂಬುದನ್ನು ಕ್ಲಿಕ್ ಮಾಡಬೇಕು.





## 3. ಬಳಕೆದಾರರ ಲಾಗಿನ್:




- ಬಳಕೆದಾರರು ಕೆಜಿಐಡಿ ಸಂಖ್ಯೆ, ಗುಪ್ತಪದ ಮತ್ತು ತೆರೆಯ ಮೇಲೆ ಪ್ರದರ್ಶಿತವಾದ ಕ್ಯಾಪ್ಚಾವನ್ನು ದಾಖಲಿಸಿ "**ಪರಿಶೀಲಿಸಿ**" ಎಂಬುದರ ಮೇಲೆ ಕ್ಲಿಕ್ ಮಾಡಬೇಕು.
- ಬಳಕೆದಾರರನ್ನು ಯಶಸ್ವಿಯಾಗಿ ಪರಿಶೀಲಿಸಲಾಗಿದೆ ಎಂಬ ಸಂದೇಶವನ್ನು ಪಡೆದ ನಂತರ,
- "**ಓಟಿಪಿಯನ್ನು ಪಡೆಯಿರಿ**" ಎಂಬುದನ್ನು ಕ್ಲಿಕ್ ಮಾಡಿ
- ಬಳಕೆದಾರರು ತಮ್ಮ ನೋಂದಣಿಯಾದ ಮೋಬೈಲ್ ಸಂಖ್ಯೆಗೆ ಓಟಿಪಿಯನ್ನು ಪಡೆಯುತ್ತಾರೆ.
- ಬಳಕೆದಾರರು ಓಟಿಪಿಯನ್ನು ದಾಖಲಿಸಿ "**ಲಾಗಿನ್**" ಎಂಬುದರ ಮೇಲೆ ಕ್ಲಿಕ್ ಮಾಡಬೇಕು.
- ಬಳಕೆದಾರರು ಅಪ್ಲಿಕೇಶನ್‌ಗೆ ಯಶಸ್ವಿಯಾಗಿ ಲಾಗ್ ಇನ್ ಆಗುತ್ತಾರೆ.

**4. ಗುಪ್ತಪದವನ್ನು ಮರೆತರೆ:**


ಬಳಕೆದಾರರ ಲಾಗಿನ್ ಪರದೆಯಲ್ಲಿ "ಗುಪ್ತಪದವನ್ನು ಮರೆತೆವು" ಎಂಬುದರ ಮೇಲೆ ಕ್ಲಿಕ್ ಮಾಡಿ




"ಕೆಜಿಐಡಿ ಸಂಖ್ಯೆ" ಯನ್ನು ದಾಖಲಿಸಿ.
"ಓಟಿಪಿಯನ್ನು ಪಡೆಯಿರಿ" **(GET OTP)** ಎಂಬುದರ ಮೇಲೆ ಕ್ಲಿಕ್ ಮಾಡಿ, ಓಟಿಪಿ ಅನ್ನು ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತದೆ, ಓಟಿಪಿಯನ್ನು ನಮೂದಿಸಿ ಮತ್ತು "ಸಲ್ಲಿಸಿ" (**SUBMIT**) ಎಂಬುದನ್ನು ಕ್ಲಿಕ್ ಮಾಡಬೇಕು.

**4.a ಗುಪ್ತಪದವನ್ನು ಮರುಜೋಡಿಸಿ:**


ಗುಪ್ತ ಪದದ ನಿಯಮದಂತೆ ಗುಪ್ತಪದವನ್ನು ದಾಖಲಿಸಿ ನಂತರ ಅದನ್ನೆ ಖಚಿತಪಡಿಸಿ ನಂತರ "ಮರುಜೋಡಿಸಿ" ಬಟನ್‌ಅನ್ನು ಕ್ಲಿಕ್ ಮಾಡಿದ ನಂತರ ಹೊಸ ಗುಪ್ತಪದವು ಅಪ್‌ಡೇಟ್ ಆಗುತ್ತದೆ.




ಮುಂದಿನ ಪರದೆಯಲ್ಲಿ "**ಅವಲಂಬಿತರನ್ನು ಸೇರಿಸಿ**" ಎಂಬುದರ ಮೇಲೆ ಕ್ಲಿಕ್ ಮಾಡಬೇಕು.
ನಂತರ ಅಪ್ಲಿಕೇಷನ್ ಡೇಟಾ ಡ್ಯಾಶ್‌ಬೋರ್ಡ್‌ಅನ್ನು ಪ್ರದರ್ಶಿಸುತ್ತದೆ.




## 5. ಡ್ಯಾಶ್‌ಬೋರ್ಡ್ ಮತ್ತು ಕಡತ





- ಅಪ್ಲಿಕೇಷನ್ ನಲ್ಲಿ ಡ್ಯಾಶ್‌ಬೋರ್ಡ್ ಪ್ರದರ್ಶಿತವಾಗುತ್ತದೆ.
- ಬಳಕೆದಾರರು ಹೆಸರು ಮತ್ತು ಇತರೆ ವಿವರಗಳನ್ನು ಖಚಿತಪಡಿಸಬಹುದು.
- ನೌಕರರ ವೈಯಕ್ತಿಕ ವಿವರಗಳು ಅಂದರೆ, ನೌಕರರ ಹೆಸರು, ಕೆಜಿಐಡಿ ಸಂಖ್ಯೆ, ಪದನಾಮ, ಇಲಾಖೆ ಇತ್ಯಾದಿಗಳನ್ನು ಖಚಿತಪಡಿಸಲು ಬಳಕೆದಾರರು "ವ್ಯಕ್ತಿ ಚಿತ್ರ (PROFILE)" ಎಂಬುದರ ಮೇಲೆ ಕ್ಲಿಕ್ ಮಾಡಬೇಕು.
- ಅಪ್ಲಿಕೇಷನ್‌ನಿಂದ ನಿರ್ಗಮಿಸಲು "ಲಾಗ್‌ಔಟ್" ಎಂಬುದನ್ನು ಕ್ಲಿಕ್ ಮಾಡಬಹುದು.

## 6. ಅವಲಂಬಿತರನ್ನು ಸೇರಿಸಿ

ಬಳಕೆದಾರರು "ಅವಲಂಬಿತರನ್ನು ಸೇರಿಸಿ" (ADD DEPENDENT) ಎಂಬುದನ್ನು ಕ್ಲಿಕ್ ಮಾಡಬೇಕು.





ಬಳಕೆದಾರರು ಎಲ್ಲಾ ಕಡ್ಡಾಯ ಅಂಕಣಗಳಾದ ಹೆಸರು (ಆಧಾರ್‌ನಲ್ಲಿರುವಂತೆ), ಸಂಬಂಧ, ಜಿಲ್ಲೆ, ರಾಜ್ಯ, ಪಿನ್‌ಕೋಡ್ ಇತ್ಯಾದಿಗಳನ್ನು ದಾಖಲಿಸಬೇಕು. (ಭಾವಚಿತ್ರವು 50 ಕೆಬಿ ಮೀರದಂತಿರಬೇಕು)




- ನೀವು ಖಚಿತವಾಗಿ ಈ ಅವಲಂಬಿತರನ್ನು ಸೇರಿಸಲಿಚ್ಛಿಸುವಿರಾ? ಎಂಬ ಸಂದೇಶಕ್ಕೆ **ಹೌದು (YES)** ಎಂಬುದನ್ನು ಕ್ಲಿಕ್ ಮಾಡಬೇಕು.
- ಅವಲಂಬಿತರನ್ನು ಯಶಸ್ವಿಯಾಗಿ ಸೇರಿಸಲಾಗಿದೆ ಎಂಬ ಸಂದೇಶವು ಪ್ರದರ್ಶಿತವಾಗುತ್ತದೆ.

**7. ಅವಲಂಬಿತರನ್ನು ವೀಕ್ಷಿಸಿ:**









ಗ್ರಿಡ್ ನಲ್ಲಿ ಅವಲಂಬಿತರ ವಿವರಗಳನ್ನು ವೀಕ್ಷಿಸಲು "ವೀಕ್ಷಿಸಿ/ಬದಲಾಯಿಸಿ/ಅಳಿಸಿ" ಎಂಬುದನ್ನು ಕ್ಲಿಕ್ ಮಾಡಬೇಕು.

**8. ಅವಲಂಬಿತರ ವಿವರಗಳ ಬದಲಾವಣೆ:**








- ➢ ಬಳಕೆದಾರರು ಅವಲಂಬಿತರ ವಿವರಗಳನ್ನು ಬದಲಾಯಿಸಲು "ವೀಕ್ಷಿಸಿ/ಬದಲಾಯಿಸಿ/ಅಳಿಸಿ" ಎಂಬುದರ ಮೇಲೆ ಕ್ಲಿಕ್ ಮಾಡಬೇಕು.
- ➢ ಆಯ್ಕೆ ಮಾಡಿದ ವಿವರಗಳು ಪರದೆಯ ಮೇಲೆ ಸ್ವಯಂ ಗೋಚರಿಸುತ್ತದೆ.
- ➢ ಬಳಕೆದಾರರು ಯಾವುದೇ ಮಾಹಿತಿಗಳನ್ನು ಬದಲಾಯಿಸಬಹುದು ನಂತರ **"ಅಪ್‌ಡೇಟ್"** ಎಂಬುದರ ಮೇಲೆ ಕ್ಲಿಕ್ ಮಾಡಬೇಕು.
- ➢ ಮಾರ್ಪಾಡಿಸಿದ ವಿವರಗಳು ಉಳಿಕೆಯಾಗುತ್ತದೆ.

**9. ಅವಲಂಬಿತರನ್ನು ತೆಗೆಯುವುದು**

ಬಳಕೆದಾರರು ಅವಲಂಬಿತರ ವಿವರಗಳನ್ನು ತೆಗೆಯಲು "ವೀಕ್ಷಿಸಿ/ಬದಲಾಯಿಸಿ/ಅಳಿಸಿ" ಎಂಬುದರ ಮೇಲೆ ಕ್ಲಿಕ್ ಮಾಡಬೇಕು.









- ➢ ಅವಲಂಬಿತರನ್ನು ತೆಗೆಯಲಿಚ್ಛಿಸುವಿರಾ ಎಂಬ ಸಂದೇಶಕ್ಕೆ ಹೌದು ಎಂದು ಕ್ಲಿಕ್ ಮಾಡಬೇಕು.
- ➢ ಆಯ್ಕೆ ಮಾಡಿದ ಅವಲಂಬಿತರ ವಿವರಗಳು ಯಶಸ್ವಿಯಾಗಿ ಅಳಿಸಲಾಗುತ್ತದೆ.
- ➢ **ಗಮನಿಸಿ:** ಒಮ್ಮೆ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ನಂತರ ಅಳಿಸಲು ಸಾಧ್ಯವಿಲ್ಲ

## 10. ಘೋಷಣೆ ಪತ್ರವನ್ನು ಅಪ್‌ಲೋಡ್ ಮಾಡಿ

ಒಮ್ಮೆ ಅವಲಂಬಿತರ ಎಲ್ಲಾ ವಿವರಗಳನ್ನು ದಾಖಲಿಸಿದ ನಂತರ ಬಳಕೆದಾರರು ಘೋಷಣೆ ಪತ್ರವನ್ನು ಅಪ್‌ಲೋಡ್ ಮಾಡಬೇಕು.




- **"ಕಡತವನ್ನು ಆಯ್ಕೆಮಾಡಿ"** ಮತ್ತು ಘೋಷಣೆ ಪತ್ರವನ್ನು ಅಪ್‌ಲೋಡ್ ಮಾಡಬೇಕು (ಕಡತವು ಪಿಡಿಎಫ್ ನಮೂನೆಯಲ್ಲಿ ಮತ್ತು ಗಾತ್ರವು 500 ಕೆಬಿ ಯಾಗಿರಬೇಕು).
- "**ಒಟಿಪಿಯನ್ನು ಪಡೆಯಿರಿ ಬಟನ್‌ಅನ್ನು**" ಕ್ಲಿಕ್ ಮಾಡಬೇಕು.
- ನೋಂದಾಯಿಸಿದ ಮೊಬೈಲ್ ಸಂಖ್ಯೆಗೆ, ಒಟಿಪಿ ಕಳುಹಿಸಲಾಗುತ್ತದೆ ಮತ್ತು ಬಳಕೆದಾರರು ಒಟಿಪಿ ಯನ್ನು ದಾಖಲಿಸಿ ಪರಿಶೀಲಿಸಬೇಕು.
- "**ಅಪ್‌ಲೋಡ್**" ಎಂಬುದರ ಮೇಲೆ ಕ್ಲಿಕ್ ಮಾಡಬೇಕು,
- ಅವಲಂಬಿತರ ಎಲ್ಲಾ ವಿವರಗಳು ಉಳಿಕೆಯಾಗುತ್ತದೆ.

## 11. ಹೆಚ್ಚಿನ ಮಾಹಿತಿ :

- ಬಳಕೆದಾರರು ಎಲ್ಲಾ ಅವಲಂಬಿತರ ಆಧಾರ್ ಡೆಮೊ ದೃಢೀಕರಣಕ್ಕಾಗಿ (UIDAI) ಡಿಡಿಓ ಅನ್ನು ಸಂಪರ್ಕಿಸಬೇಕು.
- ಡೆಮೋ ದೃಢೀಕರಣವು ಯಶಸ್ವಿಯಾದ ನಂತರವೇ, ಅವಲಂಬಿತರ ವಿವರಗಳು ಹೆಚ್‌ಆರ್‌ಎಂಎಸ್-1 ಅಪ್ಲಿಕೇಷನ್ ನಲ್ಲಿ ಲಭ್ಯವಿರುತ್ತವೆ.
- ಒಮ್ಮೆ ಅವಲಂಬಿತರನ್ನು ಡಿಡಿಓರವರಿಂದ ಡಿಜಿಟಲಿ ಅನುಮೋದಿಸಿದರೆ, ಬಳಕೆದಾರರು ಅಸ್ತಿತ್ವದಲ್ಲಿರುವ ದಾಖಲೆಗಳನ್ನು ಮಾರ್ಪಡಿಸಲು ಸಾಧ್ಯವಿಲ್ಲ.
- ಹೆಚ್‌ಆರ್‌ಎಂಎಸ್ ಅಪ್ಲಿಕೇಷನ್‌ಗೆ ಹೊಸ ಅವಲಂಬಿತರನ್ನು ಸೇರಿಸಬೇಕಾದಲ್ಲಿ ಬಳಕೆದಾರರು ಘೋಷಣೆಯ ಪತ್ರವನ್ನು ಸಲ್ಲಿಸಬೇಕು.

**ಹೆಚ್‌ಆರ್‌ಎಂಎಸ್ ಸಹಾಯವಾಣಿ**

☎ : 080-22372882     🖂: asst_hrms@gmail.com